ಅ) ಸಾಗರ ತಾಲ್ಲೂಕಿನ ಕೆಳದಿಯಲ್ಲಿ ಕೆಳದಿ ಉತ್ಸವ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಕೆಳದಿ ಉತ್ಸವವನ್ನು ಯಾವಾಗ ನಡೆಸಲಾಗುವುದು; ನಡೆಸಲು ಸರ್ಕಾರಕ್ಕಿರುವ ತೊಡಕುಗಳೇನು:

ಇ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು?

ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು)

ಅ) ಇಲ್ಲ.

ಆ) 2010–11ನೇ ಸಾಲಿನ ಆಯವ್ಯಯದ ಕ್ರಿಯಾ ಯೋಜನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ಉತ್ಸವಕ್ಕೆ ರೂ.30.00 ಲಕ್ಷಗಳನ್ನು ಅನುದಾನ ಒದಗಿಸಿಕೊಂಡಿರುವುದರಿಂದ ಕೆಳದಿ ಉತ್ಸವಕ್ಕೆ ಅನುದಾನವನ್ನು ಒದಗಿಸಿಕೊಂಡಿಲ್ಲ.

ಇ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಯಾ ಕ್ಷೇತ್ರದ ಸಾಂಸ್ಕೃತಿಕ ವೈಭವವನ್ನು ಪರಿಚಯಿಸಲು ಜಿಲ್ಲೆಗೆ ಒಂದರಂತೆ ಜಿಲ್ಲಾ ಉತ್ಸವಗಳನ್ನು ಹಮ್ಮಿಕೊಳ್ಳಲು ಅವಕಾಶ ಮಾಡಿ ಕೊಳ್ಳಲಾಗಿದೆ. ಅಂತೆಯೇ ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ಉತ್ಸವ ಮಾಡಲು ಅವಕಾಶ ಮಾಡಿಕೊಳ್ಳಲಾಗಿದೆ.

ಹೊಸ ಬಡಾವಣೆಗಳ ನಿರ್ಮಾಣ ವಿವರ

785(569) ಶ್ರೀ ಹ್ಯಾರೀಸ್ ಎನ್ ಎ:(ಶಾಂತಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ನಿವೇಶನ ರಹಿತರ ಕೊರಗು ನೀಗಿಸಲು ಐದು ಹೊಸ ಬಡಾವಣೆಗಳನ್ನು ನಿರ್ಮಿಸುವ ಸರ್ಕಾರದ ಯೋಜನೆಯ ಪ್ರಗತಿಯ ವಿವರಗಳೇನು;

ಆ) ಈ ನೂತನ ಬಡಾವಣೆಗಳನ್ನು ಕಾಲಮಿತಿಯಲ್ಲಿ ನಿರ್ಮಿಸಲು ಸರ್ಕಾರ ಹಮ್ಮಿಕೊಂಡ ಕ್ರಮಗಳೇನು;

ಇ) ಈ ಯೋಜನೆಗಾಗಿ ಸರ್ಕಾರ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ವಿಸ್ತೀರ್ಣವೆಷ್ಟು; ಎಷ್ಟು ನಿವೇಶನಗಳನ್ನು ಹಂಚಲು ಉದ್ದೇಶಿಸಲಾಗಿದೆ;

ಈ) ಹಳೆಯ ಬಡಾವಣೆಗಳ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಿದ ನಂತರವೇ ಹೊಸ ಬಡಾವಣೆಯ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಮುಂದಾಗುವುದೇ?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ಕೆಳಕಂಡ 5 ಹೊಸ ಬಡಾವಣೆಗಳನ್ನು ನಿರ್ಮಿಸಲು ಕ್ರಮಕ್ಕೆಗೊಂಡಿದ್ದು, ಯೋಜನೆಯ ಪ್ರಗತಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ 4043 ಎಕರೆ 27 ಗುಂಟೆ ವಿಸ್ತೀರ್ಣಕ್ಕೆ ಅಂತಿಮ ಅಧಿಸೂಚನೆ ಸಂಖ್ಯೆ:ಯುಡಿಡಿ 51 ಎಂಎನ್ಎಕ್ಸ್ 2010,ದಿನಾಂಕ:18-2-10 ರಂದು ಹೊರಡಿಸಲಾಗಿದೆ.
   ಮುಂದುವರೆದು ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ ಇನ್ನೂ 194 ಎಕರೆ 16 ಗುಂಟೆ ಜಮೀನಿಗೆ 2ನೇ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ:ಬೆಂಅಪ್ರಾ/ಆಯುಕ್ತರು/ಉಆ(ಭೂಸ್ವಾ)/ಅಭೂಸ್ವಾಅ/1140 /2009-10, ದಿನಾಂಕ:27-11-2009ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.
2. ಡಾ:ಕೆ.ಶಿವರಾಮ ಕಾರಂತ ಬಡಾವಣೆಗಾಗಿ 3456 ಎಕರೆ 12 ಗುಂಟೆ ವಿಸ್ತೀರ್ಣಕ್ಕೆ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ:ಬಿಡಿಎ/ಸಿಎಂಎಂಆರ್/ಡಿಸಿ(ಎಲ್ಎ)/ಎಸ್ಎಲ್ಎಓ/ಎ5/ಪಿಆರ್ -283/08-09,ದಿನಾಂಕ: 30-12-2008 ರಂದು ಹೊರಡಿಸಲಾಗಿದೆ.
3. ಶ್ರೀ ಕೆ.ಸಿ.ರೆಡ್ಡಿ ಬಡಾವಣೆಗಾಗಿ 2134 ಎಕರೆ 18.5 ಗುಂಟೆ.
4. ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆಗಾಗಿ 2806 ಎಕರೆ 09 ಗುಂಟೆ.
5. ಶ್ರೀ ಡಿ.ದೇವರಾಜ ಅರಸ್ ಬಡಾವಣೆಗಾಗಿ 1976ಎಕರೆ02 ಗುಂಟೆ, ಈ ಮೇಲ್ಕಂಡ 3 ಬಡಾವಣೆಗಳಿಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 71 ಬೆಂಭೂಸ್ವಾ 2009, ದಿನಾಂಕ:28-02-2009 ರಂದು ಸರ್ಕಾರವು

ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇನ್ನೂ ಪ್ರಾರಂಭಿಕ ಅಧಿಸೂಚನೆ ಹೊರಡಿಸಿರುವುದಿಲ್ಲ.

ಆ) ಆದಷ್ಟು ಶೀಘ್ರವಾಗಿ ಬಡಾವಣೆಗಳನ್ನು ನಿರ್ಮಿಸಲು ಕ್ರಮವಹಿಸಲಾಗುವುದು.

ಇ) ಈ 5 ನೂತನ ಬಡಾವಣೆಗಳ ನಿರ್ಮಾಣದ ಯೋಜನೆಗಾಗಿ ಉದ್ದೇಶಿಸಿರುವ ಜನೀನಿನ ವಿಸ್ತೀರ್ಣ ಈ ಕೆಳಕಂಡಂತೆ ಇರುತ್ತದೆ.

1) ನಾಡಪ್ರಭು ಕೆಂಪೇಗೌಡ ಬಡಾವಣೆ	ಎ-ಗು 4043-27
(ಸಾರ್ವಜನಿಕರ ಹಂಚಿಕೆಗಾಗಿ ಸುಮಾರು 26,352 ಹಾಗೂ ಭೂಮಾಲೀಕರ ಪರಿಹಾರಕ್ಕಾಗಿ ಸುಮಾರು 28,448 ನಿವೇಶನಗಳು)	194-16
2) ಡಾ:ಕೆ.ಶಿವರಾಮ ಕಾರಂತ ಬಡಾವಣೆ	
(ಸಾರ್ವಜನಿಕರ ಹಂಚಿಕೆಗಾಗಿ ಸುಮಾರು 8,871 ಹಾಗೂ ಭೂಮಾಲೀಕರ ಪರಿಹಾರಕ್ಕಾಗಿ ಸುಮಾರು 10,104 ನಿವೇಶನಗಳು)	3456-12
3) ಶ್ರೀ ಕೆ.ಸಿ.ರೆಡ್ಡಿ ಬಡಾವಣೆ	
4) ಶ್ರೀ ಎಸ್.ನಿಜಲಿಂಗಪ್ಪ ಬಡಾವಣೆ	
5) ಶ್ರೀ ಡಿ.ದೇವರಾಜ ಅರಸ್ ಬಡಾವಣೆ	2134-18.5 2806-09 1976-02
ಒಟ್ಟು	**14611-04-5**

ಯೋಜನಾ ವರದಿಯಂತೆ ಕ್ರಮ ವಹಿಸಲಾಗುವುದು ಹಾಗೂ ಸರ್ಕಾರದ ಆದೇಶ ಸಂಖ್ಯೆ:ನಅಇ 71 ಬೆಂಭೂಸ್ವಾ 2009, ದಿನಾಂಕ:28-2-2009ರಲ್ಲಿ ನ ಆದೇಶದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಶೇ.45ರಷ್ಟು ನಾಗರೀಕ ಸೌಲಭ್ಯಕ್ಕೆ ಮಿಸಲಿಟ್ಟ ಉಳಿಕೆ ಜಮೀನಿನಲ್ಲಿ

ಶೇ.55 ರಷ್ಟು ವಸತಿ ನಿವೇಶನಗಳನ್ನಾಗಿ ವಿಂಗಡಿಸಿ ಶೇ.60:40 ರನ್ವಯ ಹೊಸ ಆಯ್ಕೆ ಯೋಜನೆಗೆ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.

ಈ) ಹೌದು.

ಬೇಹುಗಾರಿಕೆ ಇಲಾಖೆಗೆ ಸಿಬ್ಬಂದಿ ವ್ಯವಸ್ಥೆ

786(1122) ಶ್ರೀ ಹ್ಯಾರಿಸ್ ಎನ್ ಎ:(ಶಾಂತಿನಗರ) ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೇಹುಗಾರಿಕೆಗೆ ಮಂಜೂರಾದ ವಿವಿಧ ವರ್ಗಗಳ ಒಟ್ಟು ಹುದ್ದೆಗಳೆಷ್ಟು ಮತ್ತು ಖಾಲಿ ಇರುವ ಎಲ್ಲಾ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ರಾಜ್ಯದ ಎಲ್ಲಾ ಜಿಲ್ಲೆಗಳ ಮಾಹಿತಿ ಸಂಗ್ರಹಿಸುವ ಮಹತ್ಕಾರ್ಯವನ್ನು ನಿರ್ವಹಿಸುವ ಅಧಿಕಾರಿ ವರ್ಗದ ಕೊರತೆಯಿಂದ ಇಲಾಖೆ ಹಿನ್ನೆಡೆ ಸಾಧಿಸಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಸಮರ್ಪಕ ಸಿಬ್ಬಂದಿ ವರ್ಗದ ನೇಮಕ ಮತ್ತು ಸಕಾಲಿಕ ಕ್ರಮ ಜರುಗಿಸಲಾಗುವುದೇ?

ಶ್ರೀ ಡಾ ವಿ ಎಸ್ ಆಚಾರ್ಯ(ಗೃಹ ಮತ್ತು ಮುಜರಾಯಿ ಸಚಿವರು)

ಅ)

ರಾಜ್ಯ ಗುಪ್ತವಾರ್ತೆಗೆ ಮಂಜೂರಾದ ವಿವಿಧ ವರ್ಗಗಳ ಒಟ್ಟು ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಹುದ್ದೆ	ಮಂಜೂರಾತಿ ಹುದ್ದೆ	ಪ್ರಸ್ತುತ ಹುದ್ದೆ	ಖಾಲಿ ಹುದ್ದೆ
ಎಡಿಜಿಪಿ	1	1	0
ಐಜಿಪಿ	1	1	0
ಡಿಐಜಿಪಿ	2	2	0